ಶ್ರೀ ಎಸ್. ಆರ್. ಕಂಠಿ.—ಅವರು ವನವಾಸ ಅನುಭವಿಸುತ್ತಿಲ್ಲ. ಮುನಿಸಿವಾಲಿಟಿಯವರು 17 ಸಾವಿರ ರೂಪಾಯಿ ಕೊಡುವುದು ವಿಚಾರಮಾಡಿದರೆ, ಗವರ್ನ್‌ಮೆಂಟಿನವರು ವಿಚಾರ ಮಾಡುತ್ತಾರೆ.

ಶ್ರೀ ಟಿ. ಮಾದಯ್ಯಗೌಡ.—ಮುನಿಸಿಪಲ್ ಹೈಸ್ಕೂಲು ಅಂತ ಹೇಳುತ್ತೀರಿ. ಮಕ್ಕಳ ದೃಷ್ಟಿಯಿಂದ, ಮುನಿಸಿಪಲ್ ಹೈಸ್ಕೂಲ್ ಆಗಲಿ, ಸರಕಾರಿ ಹೈಸ್ಕೂಲ್ ಆಗಲಿ, ಯಾವುದೆ ಹೈಸ್ಕೂಲ್ ಆಗಲಿ, ಮಕ್ಕಳ ಆರೋಗ್ಯ ದೃಷ್ಟಿಯಿಂದ, ಅವರ ವಿದ್ಯಾಭ್ಯಾಸ ದೃಷ್ಟಿಯಿಂದ, ಆದಷ್ಟು ಜಾಗ್ರತೆ ಈ ಕಷ್ಟವನ್ನು ನಿವಾರಣೆ ಮಾಡುವುದಕ್ಕೆ ಸರಕಾರದವರು ಎಲ್ಲಾ ಪ್ರಯತ್ನ ಮಾಡಬೇಕಾದ್ದು ಅಗತ್ಯವಲ್ಲವೆ ?

ಶ್ರೀ ಎಸ್. ಆರ್. ಕಂಠಿ.—ಇದು ಬರೀ ಸರಕಾರದ ಜವಾಬ್ದಾರಿ ಅಷ್ಟೆ ಅಲ್ಲ. ಇದರಲ್ಲಿ ಮುನಿಸಿಪಾಲಿಟಿ ಜವಾಬ್ದಾರಿಯೂ ಇದೆ. ಅವರು ಮಾಡುವುದಕ್ಕೆ ಸಿದ್ಧರಿದ್ದರೆ ನಾವು ಮಾಡುವುದಕ್ಕೆ ಸಿದ್ಧರಾಗಿದ್ದೇವೆ.

ಶ್ರೀ ಎಂ. ಎನ್. ಕೃಷ್ಣಸಿಂಗ್.—ಈ ವರ್ಷದಲ್ಲಾದರೂ ಈ ಶಾಲೆಯ ಕಟ್ಟಡಗಳ ರೂಮುಗಳನ್ನು ಮುಗಿಸಿ ಕೊಡುತ್ತೀರಾ ?

† ಶ್ರೀ ಎಸ್. ಆರ್. ಕಂಠಿ.—ಮುಗಿಸುವವರು ನಾವಲ್ಲ. ನಮ್ಮದು ಬರೀ ಗ್ರಾಂಟುಗಳನ್ನು ಕೊಡುವ ಕೆಲಸ ಮಾತ್ರ.

Mr. DEPUTY SPEAKER.—I put Question No. 667.

Acreage of Land under Paddy Cultivation in the State.

* Q.—667. Sri G. V. GOWDA (Palya).—

Will the Government be pleased to state :—

(*a*) the total acreage of land under paddy cultivation in the State ;

(*b*) the total quantity of paddy that is to be procured therefrom as per the latest Government Order ?

A.—Sri M. V. KRISHNAPPA (Minister for Revenue).—

(*a*) 25,90,950 acres.

(*b*) It is expected that 1,50,000 tonnes of paddy would be procured.

Sri J. P SARWESH.—May I know the average yield of paddy per acre ?

Sri M. V. KRISHNAPPA.—We have got 25 lakhs acres of paddy land and we grow something like 14 lakhs tons of paddy. It is simple mathematics to calculate.

ಶ್ರೀ ಎಸ್. ಎಂ. ಗುರೆಡ್ಡಿ.—ಉತ್ತರದಲ್ಲಿರುವಂತೆ 1,50,000 ಟನ್ನುಗಳಷ್ಟು ಭತ್ತವನ್ನು ಪಡೆದ ಮೇಲೆ ಅದನ್ನು ಫ್ರೀ ಮಾರ್ಕೆಟ್ಟಿಗೆ ಬಿಡುತ್ತೀರಾ ಹೇಗೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ನಮ್ಮ ಟಾರ್ಜೆಟ್ಟನ್ನು ಎರಡು ಲಕ್ಷ ಟನ್ನುಗಳಷ್ಟು ಎಂದು ಹಾಕಿಕೊಂಡಿದ್ದೇವೆ. ಈಗಾಗಲೇ ಸುಮಾರು ಒಂದೂವರೆ ಲಕ್ಷ ಟನ್ನುಗಳಷ್ಟು ಬಂದಿದೆ. ಎರಡು ಲಕ್ಷ ಟನ್ನುಗಳು ಭರ್ತಿಯಾದ ಮೇಲೆ ಆ ಪ್ರಶ್ನೆ ಉದ್ಭವವಾಗುತ್ತದೆ. ಆಗ ಅದನ್ನು ಯೋಚನೆ ಮಾಡುತ್ತೇವೆ.

ಶ್ರೀ ಜಿ. ಎನ್. ಪಾಟೀಲ್.—ಒಬ್ಬ ರೈತ ಇಂತಿಷ್ಟು ಕೊಡಬೇಕೆಂದು ಸರಕಾರಕ್ಕೆ ಕೊಟ್ಟ ಮೇಲೆ ಅವನಲ್ಲಿ ಉಳಿದಿರುವ ದವಸವನ್ನು ಮಾರಲಿಕ್ಕೆ ಏನು ಅಭ್ಯಂತರ ಇದೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಏನು ಆಭ್ಯಂತರವಿಲ್ಲ. ಆದರೆ ಕಂಜೊ್ಯಲು ಪೈ್ರಸುಗಳು ಎಂದು ನಿಗದಿ ಮಾಡಲಾಗಿದೆ. ಅದರಂತೆ ಮಾರಲಿಕ್ಕೆ ಏನೂ ಆಭ್ಯಂತರವಿಲ್ಲ. ಹಾಗಿಲ್ಲದೆ ಬೇರ ರೀತಿಯಾಗಿ ಮಾರಿದರೆ ಅವರು, ಇವರು ಅಥವಾ ಪೋಲೀಸರು ಬಂದು ಹಿಡಿದುಕೊಳ್ಳುತ್ತಾರೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಒಂದೊಂದು ಜಿಲ್ಲೆಯಲ್ಲಿ ತರಿ ಜಮೀನಿನಲ್ಲಿ ಇಷ್ಟು ಭತ್ತ ಕೊಡಬೇಕೆಂದು ನಿಗದಿ ಮಾಡಿದಂತೆ ಅವರು ಕೊಟ್ಟು ಪೂರ್ತಿ ಮಾಡಿದ್ದರೆ ಅಂತಹ ಜಿಲ್ಲೆಯಲ್ಲಿ ಮಾರುವ ನಿರ್ಬಂಧವನ್ನು ತೆಗೆದು ಫ್ರೀ ಮಾರ್ಕೆಟ್ಟಿಗೆ ಅವಕಾಶವನ್ನು ಏಕೆ ಕೊಡಬಾರದು ?

ಶ್ರೀ ಎಂ. ವಿ. ಕೃಷ್ಣಪ್ಪ.—ಇನ್ನೂ ಯಾವ ಜಿಲ್ಲೆಯಲ್ಲೂ ನಾವು ನಿಗದಿ ಮಾಡಿರುವ ಟಾರ್ಜೆಟ್ಟನ್ನು ಮೀರಿಲ್ಲ.

ಶ್ರೀ ಟಿ. ಆರ್. ಪರಮೇಶ್ವರಯ್ಯ.—ಇತ್ತೀಚೆಗೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ನಿಗದಿ ಮಾಡಿರುವ ಬೆರೆಯಂತೆ ಹಣ ಕೊಡುತ್ತಿಲ್ಲ ಎನ್ನುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಸರಕಾರದವರು ಎರಡು ಮೂರು ರೇಟುಗಳನ್ನು ನಿಗದಿ ಮಾಡಿದ್ದಾರೆ. 36.8 ರಿಂದ 37.8 ರ ವರೆಗೆ ಒಂದು ಕ್ವಿಂಟಾಲಿಗೆ ಕೋರ್ಸು ವೆರೈಟಿ, ಇನ್ನೊಂದು 43 ರಿಂದ 47 ರ ವರೆಗೆ ಕ್ವಿಂಟಾಲಿಗೆ ಮಾರಬೇಕೆಂದು ಇದೆ. ಆ ರೀತಿಯಾದ ಬೆರೆಯನ್ನು ಎಲ್ಲೆಲ್ಲ ಕೊಡಲಲ್ಲ ಎನ್ನುವುದನ್ನು ನನ್ನ ಗಮನಕ್ಕೆ ತಂದರೆ ನಾನು ಅವರಿಗೆ ಆ ಬೆರೆಯನ್ನು ಕೊಡಿಸಿ ಕೊಡಬಹುದು.

ಶ್ರೀ ಆರ್. ಎಸ್. ಪಾಟೀಲ್.—ನಿಗದಿಯಾದ ದರಗಳನ್ನು ಕೊಡುವಾಗ ಜಿಲ್ಲಾಧಿಕಾರಿಗಳು ಇನ್‌ಸಿಡೆಂಟಲ್ ಚಾರ್ಜುಗಳನ್ನು ಕೊಡಬೇಕೆಂದು ವಸೂಲು ಮಾಡುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ನಿನ್ನೆ ದಿವನ ಮಾನ್ಯ ಸದಸ್ಯರು ಮತ್ತು ಮಾನ್ಯ ಸದಸ್ಯರಾದ ಶ್ರೀಮಾನ್ ದೇಸಾಯಿಯವರೂ ಕೂಡ ಇದರ ಬಗ್ಗೆ ನನ್ನ ಗಮನಕ್ಕೆ ತಂದರು. ನಾನು ಕೂಡಲೇ ನಮ್ಮ ಸೆಕ್ರಟರಿಗಳ ಮೂಲಕ ಯಾವ ರೇಟುಗಳು ನಿಗದಿ ಮಾಡರಾಗಿದೆಯೋ ಅದನ್ನು ಕೊಡಬೇಕು ಅದರ ಮೇಲೆ ಇನ್‌ಸಿಡೆಂಟರ್ ಚಾರ್ಜುಗಳು ಬಂದರೆ ಅದನ್ನು ಸರಕಾರವೇ ಕೊಟ್ಟು ಮಾರುವಾಗ ಅದನ್ನು ಸರಿಪಡಿಸಿಕೊಳ್ಳಬೇಕು ಎಂದು ತಿಳಿಸಲಾಗಿದೆ.

Sri R. S. HEGDE.—Is it the view of the State Government that the State has a defiiciency of about 1½ lakhs tonnes of paddy only ?

Sri M. V. KRISHNAPPA.—Our deficiency is about 7 lakhs tonnes. Out of 7 lakhs, we have procured 3 lakhs tonnes. The Government of India has agreed to supply 3 lakhs tonnes. The remaining quantity, we hope to procure internally.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಭತ್ತ ಜಾಸ್ತಿಯಾಗಿ ಸರಕಾರಕ್ಕೆ ಬರುತ್ತಿದ್ದರೂ ಅದಕ್ಕೆ ಬೇಕಾದ ಹಣ ಸಿಗದೆ ವಿಳಂಬವಾಗಿದೆ ಎಂದು ತಿಳಿಸಿದಿರಿ. ಹೀಗೆ ಹಣದ ಕೊರತೆ ಇರುವಾಗ ಇದನ್ನು ಫ್ರೀ ಮಾರ್ಕೆಟ್ಟಿಗೆ ಬಿಡುವುದು ಸರಿಯಲ್ಲವೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಭತ್ತ ಪಡೆದ ತಕ್ಷಣ ಹಣವನ್ನು ಒದಗಿಸಬೇಕಾದುದು ಸರಿ. ಆದರೆ ತಾವೇ ಹೇಳಿದಂತೆ ಅಲ್ಲಲ್ಲಿ ತೊಂದರೆಗಳು ಇದ್ದದ್ದು ನಿಜ, ಇದು ನತ್ಯಕ್ಕೆ ದೂರವಾದ ಮಾತೇನಲ್ಲ. ಸರಕಾರದವರು ನಮಗೆ ಬೇಕಾದಷ್ಟು ಧಾನ್ಯವನ್ನು ಪ್ರೊಕ್ಯೂರು ಮಾಡಬೇಕಾದರೆ, ಸುಮಾರು 15–16 ಕೋಟಿ ರೂಪಾಯಿಗಳಷ್ಟು ಬೇಕಾಗುತ್ತದೆ. ನಮ್ಮ ಹತ್ತಿರ ಅಷ್ಟು ಹಣ ಇಲ್ಲ. ನಮ್ಮಲ್ಲಿ ಸುಮಾರು ಒಂದೂವರೆ ಕೋಟಿಯಷ್ಟು ಇತ್ತು. ಅಲ್ಲದೆ ಕೋ-ಆಪರೇಟೀವ್ ಸೊಸೈಟಿಗಳಿಗೆ ಒಂದು ಕೋಟಿ ಕೊಟ್ಟುದ್ದನ್ನು ಅವರು ಐದು ಕೋಟಿಯಷ್ಟು ಮಾಡಿಕೊಂಡು ದವನವನ್ನು ಕೊಂಡು ಸರಬರಾಜು ಮಾಡುತ್ತಿದ್ದಾರೆ. ನಮ್ಮಲ್ಲರುವ ಒಟ್ಟು ಹಣ ಸುಮಾರು 8–9 ಕೋಟಿಗಳಷ್ಟಾಗ ಬಹುದು. ಇದರಿಂದಾಗಿ ಕೆಲವು ಸಂದರ್ಭಗಳಲ್ಲಿ ಹಣ ಕೊಡುವಾಗ ಸ್ವಲ್ಪ ತೊಂದರೆಗಳಾಗಿರ ಬಹುದು. ಇದರಿಂದಲೇ ಪ್ರೊಕ್ಯೂರುಮೆಂಟನ್ನೇ ನಾವು ಸ್ವಲ್ಪ ನಿಧಾನವಾಗಿಯೇ ಮಾಡಿದೆವು. ಈಗ ಫುಡ್ ಕಾರ್ಪೊರೇಷನ್ನು ಆಗಿದೆ. ಇದನ್ನು ಕೇಂದ್ರ ಸರಕಾರ ಮಾಡಿರುವುದರಿಂದ ನಾವು ಕೊಂಡು ಕೊಂಡಿರುವ ಅಕ್ಕಿಯನ್ನೆಲ್ಲಾ ಅವರೇ ಕೊಂಡುಕೊಳ್ಳುತ್ತಾರೆ. ಅವೆಲ್ಲಾ ನಮ್ಮ ಗೋಡೌನುಗಳಲ್ಲೇ ಇದ್ದರೂ ಲೆಕ್ಕ ಮಾತ್ರ ಅವರ ಹೆಸರಿನಲ್ಲ ಇರುತ್ತದೆ. ಅವರ ಸ್ಟಾಕುಗಳಲ್ಲದ್ದರೂ ಕೂಡ ಇವನ್ನೆಲ್ಲಾ ಬುಕ್ ಅಡ್‌ಜಸ್ಟುಮೆಂಟು ಮೂಲಕ ಮಾಡಿಕೊಳ್ಳಲು ಅನುಕೂಲವಾಗುತ್ತದೆ. ಈಗಾಗಲೇ ಈ ಕಾರ್ಪೊರೇಷನ್ನಿನವರು ಒಂದು ಕೋಟಿಯಷ್ಟು ಹಣ ಕೊಟ್ಟಿದ್ದಾರೆ. ಇನ್ನೂ ಕೊಡುತ್ತಾರೆ.

Sri C. S. HULKOTI.—What is the difficulty for Thasildar or Society to pay the amount in cash on the spot and take delivery of the food article ?

ಶ್ರೀ ಎಂ. ವಿ. ಕೃಷ್ಣಪ್ಪ.—ಕ್ಯಾಷಿನಲ್ಲೇ ಹಣವನ್ನು ಕೊಡಬೇಕೆಂದು ತಹಶೀಲುದಾರರು ಗಳಿಗೆ ಆರ್ಡರಿದೆ. ಆದರೆ ತಹಶೀಲುದಾರರುಗಳು ಎಲ್ಲ ದುಡ್ಡನ್ನೂ ಹೊರಕ್ಕೆ ಹೋಗುವಾಗ ತೆಗೆದುಕೊಂಡು ಹೋಗಲು ಆಗುವುದಿಲ್ಲ. ಅದು ಸುರಕ್ಷಿತವಾಗಿರುವುದಿಲ್ಲ. ಅದಕ್ಕಾಗಿ ಅವರುಗಳು ಒಂದು ಚೆಕ್ಕನ್ನು ಟ್ರೆಷರಿಗೋ ಬ್ಯಾಂಕಿಗೋ, ಕೊಡುತ್ತಾರೆ. ನ್ಯಾಕು ತೆಗೆದುಕೊಂಡು ಅದರ ಮೇಲೆ ಚೆಕ್ಕುಗಳನ್ನು ಕೊಡುತ್ತಾರೆ.

ಶ್ರೀ ಸಿ. ಎಸ್. ಹುಲ್‌ಕೋಟಿ.—ಹಣವನ್ನು ತೆಗೆದುಕೊಳ್ಳಲಿಕ್ಕೆ ಎಲ್ಲಿಗೆ ಹೋಗಬೇಕು ?

ಶ್ರೀ ಎಂ. ವಿ. ಕೃಷ್ಣಪ್ಪ.—ಸೊಸೈಟಿಗಳ ಮೂಲಕ ಇದನ್ನು ಕಾರ್ಯಗತ ಮಾಡಬೇಕೆಂದು ಇದೆ. ಸೊಸೈಟಿಗಳು ಅವರ ಬ್ಯಾಂಕಿಗೋ ಅಥವಾ ಟ್ರೆಷರಿಗೋ ನೋಡಿಕೊಂಡು ಚೆಕ್ಕನ್ನು ಕೊಡುತ್ತಾರೆ.

ಶ್ರೀ ಎಸ್. ಎಂ. ಗುರೆಡ್ಡಿ.—ಸೊಸೈಟಿಗಳ ಮೂಲಕ ಬಿಜಾಪುರದಲ್ಲಿ ಅಕ್ಕಿಯನ್ನು ಹಂಚ ಬೇಕೆಂದು ಕೊಟ್ಟಿರುವುದು ಮಾಯವಾಗುತ್ತಿದೆ. ಇದರ ಬಗ್ಗೆ ಸರಕಾರದವರು ಅಕ್ಕಿಯನ್ನು ಯಾವ ರೀತಿ ಒದಗಿಸುವ ಪ್ರಯತ್ನ ಮಾಡುತ್ತಿದ್ದೀರಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಕೆಲವು ದಿನಗಳ ಹಿಂದೆ ಇದರ ಬಗ್ಗೆ ಮಾನ್ಯ ಸದಸ್ಯರಾದ ಶ್ರೀಮತಿ ಸುಶೀಲಾಬಾಯಿ ಪೂರವರು ನನ್ನ ಗಮನಕ್ಕೆ ತಂದರು. ನಿನ್ನೆ ದಿನ ಇಲ್ಲಿಂದ ಬಿಜಾಪುರದ ಜಿಲ್ಲಾಧಿಕಾರಿಗಳಿಗೆ ಅಕ್ಕಿಯನ್ನು ಕೊಡಬೇಕೆಂದು ಆದೇಶ ಕಳುಹಿಸಿದೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಹಣದ ತೊಂದರೆ ಇದೆ ಎನ್ನುವ ವಿಚಾರ ಹೇಳಿದಿರಿ. ಕೆಲವು ಕಡೆಗಳಲ್ಲಿ ಟಾರ್ಜೆಟ್ಟಿನಂತೆ ಭತ್ತವನ್ನೂ ಶೇಖರಣೆ ಮಾಡಿಲ್ಲ. ಅಲ್ಲದೆ ರೈತರು ಜಮೀನಿನಲ್ಲಿ ಬೆಳೆದ ಭತ್ತವನ್ನು ರೈಸು ಮಿಲ್ಲಿಗೆ ತೆಗೆದುಕೊಂಡು ಹೋಗುವುದಕ್ಕೆ ಮುಂಚೆ ಸರಕಾರಕ್ಕೆ ಇಷ್ಟು ಕೊಡ ಬೇಕೆಂದು ಕೊಟ್ಟು ಬಂದಿದ್ದರೂ ಮಿಲ್ಲಿನಲ್ಲಿಯೂ ಕೂಡ ತಂದಿರುವ ದವಸದಲ್ಲಿ ಅರ್ಧದಷ್ಟು ಕೊಡು ಎಂದು ಹೇಳಿದರೆ ಸರಿಯಾಗಿರುತ್ತದೆಯೇ? ಅವನು ತಂದಿರುವ ಅರ್ಧ ಭಾಗವನ್ನು ಫ್ರೀ ಮಾರ್ಕೆಟ್ಟಿಗೇಕೆ ಮಾರಲು ಅವಕಾಶ ಕೊಡಬಾರದು ?

ಶ್ರೀ ಎಂ. ವಿ. ಕೃಷ್ಣಪ್ಪ.—ಪ್ರೊಕ್ಯೂರುಮೆಂಟು ಆರ್ಡರಿನಲ್ಲಿರುವಂತೆ ಹತ್ತು ಎಕರೆಗಳಷ್ಟು ಜಮೀನು ಇರುವವರು ಒಂದೂವರೆ ಕ್ವಿಂಟಲುಗಳಷ್ಟು ಭತ್ತವನ್ನು ಸರಕಾರಕ್ಕೆ ಕೊಡಬೇಕೆಂದು ಇದೆ. ಅದನ್ನು ಕೊಟ್ಟು ಬಾಕಿಯದನ್ನು ಮಿಲ್ಲಿಗೆ ತೆಗೆದುಕೊಂಡು ಹೋಗಿ ಅಕ್ಕಿ ಮಾಡಿಕೊಂಡು ಅವನು ಉಪಯೋಗಿಸಬಹುದು ಅಥವಾ ಮಾರಬಹುದು. ಆದರೆ ಮಿಲ್ಲಿನವರು ಅರ್ಧ ಭಾಗ ಕೇಳಿದರೂ ಅವರಿಗೆ ಕೊಡಬೇಕಾಗಿಲ್ಲ ಅವರಿಗೆ ಆ ರೀತಿಯಾದ ಎಕ್ಸೆಂಪ್‌ಷನ್ನೂ ಇದೆ.

Sri S. S. KOLKEBAIL.—Is it because of the restrictions in the movement of food grains from District to District and Taluk to Taluk, we are experiencing scarcity of food grains.

2-00 P.M.

ಶ್ರೀ ಎಂ. ವಿ. ಕೃಷ್ಣಪ್ಪ.—ಡಿಸ್ಟ್ರಿಕ್ಟ್ ಮೂವ್‌ಮೆಂಟ್ ಡಿಸ್ಟ್ರಿಕ್ಟ್ ಮೇಲೆ ಕಂಟ್ರೋಲ್ ಹಾಕಿದ್ದೇವೆ ಇದರಿಂದ ಸ್ವಲ್ಪ ತೊಂದರೆಯಾಗಿದೆ. ಡೆಫಿಸಿಟ್ ಡಿಸ್ಟ್ರಿಕ್ಟ್‌ಗೆ ಸರ್ಪ್ಲಸ್ ಡಿಸ್ಟ್ರಿಕ್ಟ್‌ನಿಂದ ಭತ್ತ ಬಾರದೆ ಬಹಳ ತೊಂದರೆಯಾಗಿದೆ. ಬೀದರ್ ಜಿಲ್ಲೆಗೆ ಗುಲ್‌ಬರ್ಗ ಜಿಲ್ಲೆಯಿಂದ ಜೋಳ ತರಲಾಗುತ್ತಿತ್ತು. ಮುವ್‌ಮೆಂಟ್ ಬ್ಯಾನ್ ಮಾಡಿದ ನಂತರ ಬೀದರ್ ಜಿಲ್ಲೆಗೆ ತೊಂದರೆಯಾಗಿದೆ. ಅದೇ ರೀತಿ ಮಂಗಳೂರಿನವರಿಗೂ, ಶಿವಮೊಗ್ಗ, ಚಿಕ್ಕಮಗಳೂರು, ಮೈಸೂರು, ಕೂರ್ಗ್ ಜಿಲ್ಲೆಗಳಿಂದ ಭತ್ತ ಹೋಗುತ್ತಿತ್ತು ; ಆದರೆ ಬ್ಯಾನ್ ಮಾಡಿದ ನಂತರ ಮಂಗಳೂರಿನವರಿಗೆ ತೊಂದರೆಯಾಗಿದೆ. ಜನರ ಹಿತ ದೃಷ್ಟಿಯಿಂದ ಡಿಸ್ಟ್ರಿಕ್ಟ್‌ಟು-ಡಿಸ್ಟ್ರಿಕ್ಟ್ ಭತ್ತ ಕಳುಹಿಸಿಕೊಡುವುದಕ್ಕೆ ಪರ್ಮಿಟ್ ಕೊಟ್ಟು ಅವರ ತೊಂದರೆ ನಿವಾರಣೆ ಮಾಡುತ್ತೇವೆ.

Mr. SPEAKER.—Question Hour is over.